


ಎಡದಿಂದ ಬಲಕ್ಕೆ :

1. ಮಂದಹಾಸವನ್ನು ಕಂಡ ಮೇಲಷ್ಟೇ ನೆಮ್ಮದಿಯಾದೀತು (4)
3. ವ್ಯಾಕರಣ ಕಲಿಯಲಿಲ್ಲವೆಂದು ಈಗ ಚಿಂತಿತನಾದನೇ ? (3)
4. ಚಳವಳಿಗೆಂದು ಬಂದ ಜನರ ವಸ್ತ್ರವೇ ಹಿಂದುಮುಂದು (3)
6. ಹೋಳಿಗೆ ಮಾಡಲಿಕ್ಕೆ ಕಲಿತಿದ್ದೇ ಆಕೆಯ ಹೆಚ್ಚುಗಾರಿಕೆ (4)
7. ಇಂತಹ ಮೂರ್ಖತನ ಬಹಳ ಅಪಾಯಕರ (3)
9. ಅನುಮತಿ ಸಿಗುವ ಕಾಲ ಬಹಳ ಏನಿಲ್ಲ (3)
11. ತಾಪತ್ರಯ ತೀರಿಸಿಕೊಳ್ಳಲು ಭಿಕ್ಷೆ ಬೇಡುವುದೇ? (3)
13. ಸುಮ್ಮನಿರಬೇಡ, ಮೊದಲು ಆ ಮಗುವನ್ನು ಸಂತೈಸು (3)
15. ಭಯ ಪಡುವಂತೆ ಪೀಡಿಸಿತು ಪ್ರಾಚೀನ ದೈತ್ಯ ಪ್ರಾಣಿ (4)
17. ಝೇಂಕಾರ ಕೇಳಿಸಿದಾಗೆಲ್ಲ ನೆನಪಾಗುತ್ತಾನೆ ಅಗಸ (3)
18. ಅಲ್ಲಿನ ವನಿತೆಯರ ಕೆಲಸದಲ್ಲಿ ಎಂಥ ಹೊಸತನ ! (3)
19. ಮಾಣಿಕ್ಯ ಸೇರಿಸಿ ರಚಿಸಿರುವ ಆಕೃತಿ ಎಷ್ಟು ಸುಂದರ ನೋಡಿ (4)

ಮೇಲಿಂದ ಕೆಳಕ್ಕೆ :

1. ಸಹ್ಯವಲ್ಲದ್ದನ್ನು ಒಪ್ಪಬಾರದೆಂದು ಆತನ ಬುದ್ಧಿವಾದ (3)
2. ನಾಳೆಯ ಕೆಲಸಕ್ಕೆ ಬೇಕಾದೀತು ಈ ತೆಳು ಕೊಳವೆ (3)
3. ವಿಪ್ರ ಜನರ ನಡು ನಡುವೆ ಇದೆಂತಹ ವಹಿವಾಟು? (3)
5. ಜವರಾಯನನ್ನು ಧಿಕ್ಕರಿಸುವಂತಿದೆ ಆತನ ತಾರುಣ್ಯ (3)
7. ಮರುಗುತ್ತಿರುವವರನ್ನು ಸಂತೈಸಲು ಹನುಮಂತನೇ ಸರಿ (3)
8. ಕೊಳ್ಳುವುದೇ ತಪ್ಪೆನಿಸುವಷ್ಟು ಕೆಟ್ಟ ಗುಣಮಟ್ಟ (3)
9. ಆರಂಭದಲ್ಲಿ ಮಾತ್ರ ಭಾರೀ ಆರ್ಭಟ (3)
10. ಥಳ ಥಳಿಸುವಂತೆ ಇರಬೇಕೆಂಬುದು ಗೊತ್ತಾಗುವಂತೆ ಹೇಳು (3)
12. ರುದ್ರನ ಮೈಯಲ್ಲೂ ಇದೆಯೇ ನೆತ್ತರು?(3)
14. ಬೆಳಕು ಮೂಡುತ್ತಲೇ ಕಾಣಿಸಿದ್ದು ಇದಾವ ಕೀಟ ? (3)
15. ಪರಕೀಯರ ಸೇವೆಯಲ್ಲೇ ಮುಳುಗಿದ್ದಾನೆ ಎಂಥ ಪೆದ್ದ ! (3)
16. ತಾಯಿಯನ್ನು ಸಲಹಿದ್ದು ಆಕೆಯ ಮಗನೇ ತಾನೇ (3)

## 11.08.16 ರ ಉತ್ತರಗಳು

ಎಡದಿಂದ ಬಲಕ್ಕೆ :

1. ಸಮಾರಂಭ 3. ಕದಮೋ (=ಮೋದಕ ಹಿಂದಿರುಗಿದೆ) 4. ರಮ್ಯತೆ 6. ಸರಪಣಿ 7. ಪರಿಣಯ 9. ಹಗೆತನ 11. ರಮಾಕಾಂತ 13. ಪರಾಜಯ 15. ಕಾಷ್ಠಕಲೆ 17. ನವೀನ 18. ರಜತ 19. ನವನೀತ

ಮೇಲಿಂದ ಕೆಳಕ್ಕೆ :

1. ಸಮೋಸ 2. ಭರಣಿ 3. ಕಠಿಣ 5. ತೆರಿಗೆ 7. ಪರಾತ್ಪರ 8. ಯಥೋಚಿತ 9. ಹಸ್ತಕ್ಷೇಪ 10. ನವೋದಯ 12. ಕಾಂಚನ 14. ರಾದ್ಧಾಂತ 15. ಕಾನನ 16. ಲೆರತ ( =ತರಲೆ ತಲೆಕೆಳಗು )



# ಲೈಟೋಲಿ ಹಿರಿಮೆ ಏನು ?

ಲೈಟೋಲಿ ಅದು ಆಫ್ರಿಕಾ ಖಂಡದ, ತಾಂಜಾನಿಯಾ ದೇಶದ ಒಂದು ಸ್ಥಳ. ತಾಂಜಾನಿಯಾದ ವಿಶ್ವ ಪ್ರಸಿದ್ಧ 'ಸೆರೆಂಗೆಟಿ ರಾಷ್ಟ್ರೀಯ ಉದ್ಯಾನ'ದ ಸನಿಹದ ಈ ಸ್ಥಳದ ನೆಲದಲ್ಲಿ ಇತ್ತೀಚಿನವರೆಗೂ ನಮ್ಮೆಲ್ಲರ ಮೂಲ ಪಿತಾಮಹರೆಂದೇ ನಿರ್ಧಾರಗೊಂಡಿದ್ದ ಮತ್ತು ಈಗ್ಗೆ 29 ಲಕ್ಷದಿಂದ 39 ಲಕ್ಷ ವರ್ಷಗಳ ಹಿಂದಿನ ಅವಧಿಯಲ್ಲಿ ಧರೆಯಲ್ಲಿದ್ದ 'ಅಸ್ಟ್ರಲೋಪಿತೀಕಸ್ ಅಫರೆನ್ಸಿಸ್' ಪೂರ್ವಮಾನವ ಪ್ರಭೇದದ (ಚಿತ್ರ 2 ) 'ಪಾದ ಮುದ್ರೆ'ಗಳು ಅಚ್ಚುಗೊಂಡಿವೆ ; ಈಗಲೂ ಹಾಗೆಯೇ ಉಳಿದಿವೆ ! ಈ ಅನನ್ಯ , ಅಮೂಲ್ಯ ಪಳೆಯುಳಿಕೆಗಳನ್ನು ಹೊಂದಿರುವುದೇ ಲೈಟೋಲಿ ಯ ಹಿರಿಮೆ. ಅದೊಂದು ಬಹು ಕುತೂಹಲದ, ವಾಸ್ತವದ ಕತೆ .

ಅದಕ್ಕೆಲ್ಲ ಮೂಲವಾದ ಘಟನೆ ಏನೆಂದರೆ ಈಗ್ಗೆ 36 ಲಕ್ಷ ವರ್ಷ ಹಿಂದೆ ಲೈಟೋಲಿಯಲ್ಲಿ ಜ್ವಾಲಾಮುಖಿಯೊಂದು ಸ್ಫೋಟಗೊಂಡಿತ್ತು. ಅದರಿಂದ ಹೊಮ್ಮಿದ ಹೇರಳ ಪ್ರಮಾಣದ ಬೂದಿ ರಾಶಿ ಸುತ್ತಲೂ ಹತ್ತಾರು ಕಿಲೋ ಮೀಟರ್ ದೂರದವರೆಗೂ ನೆಲದ ಮೇಲೆ ಒಂದು ದಪ್ಪ ಪದರವಾಗಿ ಸಂಗ್ರಹಗೊಂಡಿತ್ತು. ಅದು ನಿಧಾನವಾಗಿ ಸಾಂದ್ರಗೊಂಡು ಸಂಪೂರ್ಣ ಗಟ್ಟಿಯಾಗುವುದರೊಳಗೇ ತೆಳ್ಳನೆಯ ಮಳೆ ಬಂದು ಲೈಟೋಲಿಯ ಆ ಬೂದಿಭರಿತ ಪ್ರದೇಶವೆಲ್ಲ ಕಡಲ ತೀರದ ತೇವಗೊಂಡ ಮರಳ ಹಾಸಿನಂತೆ ಮೆತ್ತಗಾಗಿತ್ತು; ಗಟ್ಟಿ ಕೆಸರಿನಂತಾಗಿತ್ತು.

ಹಾಗಿದ್ದಾಗ ಅಲ್ಲೇ ಎಲ್ಲೋ ವಾಸವಾಗಿದ್ದ ಆ ನಮ್ಮ ಪೂರ್ವಜರ ಒಂದು ಗುಂಪಿನ ಇಬ್ಬರು ವಯಸ್ಕರು ಒಬ್ಬ ಪುರುಷ, ಮತ್ತೊರ್ವ ಸ್ತ್ರೀ ( ಚಿತ್ರ 1) ಅದೇ ಪ್ರದೇಶದ ಮೂಲಕ ಅದೆಲ್ಲಿಗೋ ನಡೆದು ಸಾಗಿದ್ದರು. ಸಹಜವಾಗಿಯೇ ಅವರಿಬ್ಬರದೂ ಹೆಜ್ಜೆ ಗುರುತುಗಳು ಬೂದಿ ಕೆಸರಲ್ಲಿ ಸಾಲಾಗಿ ಅಚ್ಚಾದುವು ; ಹಾಗೆಯೇ ನಿಧಾನವಾಗಿ ಒಣಗಿ ಕಲ್ಲಿನಂತೆ ಗಟ್ಟಿಯಾದುವು ( ಚಿತ್ರ 3). ಯೋಗಾಯೋಗವೆಂಬಂತೆ ಅನತಿ ಕಾಲದಲ್ಲೇ ಲೈಟೋಲಿಯ ಅದೇ ಜ್ವಾಲಾಮುಖಿ ಮತ್ತೊಮ್ಮೆ ಸ್ಫೋಟಗೊಂಡು ಮತ್ತೆ ಬೂದಿ ಸುರಿದು ಅದರ ಕೆಳಗೆ ಈ ಹೆಜ್ಜೆ ಗುರುತುಗಳು ಮುಚ್ಚಿಹೋಗಿ,




ಸುರಕ್ಷಿತವಾಗಿ ಉಳಿದುವು ; ಈಗಲೂ ಹಾಗೆಯೇ ಉಳಿದಿವೆ .

ಇಸವಿ 1976 ರಲ್ಲಿ ವಿಶ್ವಖ್ಯಾತ ಪುರಾತತ್ವ ವಿಜ್ಞಾನಿ 'ಮೇರೀ ಲೀಕೀ' ಅವರಿಂದ ಶೋಧಗೊಂಡ ಈ ಪೂರ್ವ ಮಾನವ ಪಾದಮುದ್ರೆಗಳು ಮಾನವೇತಿಹಾಸದ ಬಹು ಮಹತ್ವದ ಪಳೆಯುಳಿಕೆಗಳಾಗಿವೆ. ಏಕೆಂದರೆ 'ದ್ವಿಪಾದಿತ್ವ' ಪರಿಪೂರ್ಣವಾಗಿ ಮೈಗೂಡಿದ್ದ ಪ್ರಥಮ ಪೂರ್ವ ಮಾನವ ಪ್ರಭೇದವಾದ ಅಸ್ಟ್ರಲೋಪಿತೀಕಸ್ ಅಫರೆನ್ಸಿಸ್ ನ ಹೆಜ್ಜೆಗಳ ಆಕಾರ, ಪಾದದ ಬೆರಳುಗಳ ವಿನ್ಯಾಸ ವಿವರ, ನಡಿಗೆಯ ಕ್ರಮ ಇತ್ಯಾದಿಗಳ ಸ್ಪಷ್ಟ, ನೈಜ, ನೇರ ಚಿತ್ರಣ ಈ ಹೆಜ್ಜೆ ಗುರುತುಗಳಲ್ಲಿ ಲಭ್ಯವಿದೆ. 36 ಲಕ್ಷ ವರ್ಷ ಹಿಂದಿನ ಈ ಅಪೂರ್ವ ಅತ್ಯದ್ಭುತ ಆಕರಗಳ ನೆಲೆಯಾಗಿ ಲೈಟೋಲಿ ಭಾರೀ ಹಿರಿಮೆ ಗಳಿಸಿದೆ ; ವಿಶ್ವ ಪ್ರಸಿದ್ಧಿ ಪಡೆದಿದೆ.

■ ಎನ್. ವಾಸುದೇವ್